Sri M.Y. GHORPADE: Any suggestions from all sides is always welcome. ಯಾವಾಗ ಬಿಡುವು ಇರುತ್ತದೆ, ಆವಾಗ ಅವರ ಜೊತೆ ಮಾತನಾಡುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, 1 ಲಕ್ಷ 24 ಸಾವಿರ ಕೊಳವೆ ಬಾವಿಗಳಲ್ಲಿ ಕೆಟ್ಟಿರತಕ್ಕಂಥದ್ದು ನನ್ನ ಅಂದಾಜಿನಲ್ಲಿ ಒಂದು ಲಕ್ಷ ಬಾವಿಗಳಲ್ಲಿ ನೀರಿನ ಮಟ್ಟ , ವಾಟರ್ ಲೆವಲ್‌ನಲ್ಲಿ ಅದು ಕೆಳಗಡೆ ಹೋಗಿದೆ. ಆದ್ದರಿಂದ ಇವತ್ತಿನ ದಿವಸ ಅನೇಕ ಕಡೆ ಬೋರ್‌ವೆಲ್‌ಗಳು ಕೆಟ್ಟು ಹೋಗಿವೆ ಎಂದು ಹೇಳುತ್ತೇವೆ. ನಮಗೆ ಗೊತ್ತಿರತಕ್ಕಂಥದ್ದು ಪಂಪ್‌ಹಾಕಿದರೆ ನೀರು ಬರುತ್ತದೆ ನೀರು ಬರದೇ ಇದ್ದರೆ ಕೆಟ್ಟು ಹೋಗಿದೆ ಎಂದು ಹೇಳುತ್ತಾರೆ. ಅದಕ್ಕೆ ಬಹಳ ಪ್ರಮುಖವಾದ ಕಾರಣ ವಾಟರ್ ಲೆವಲ್ ಏನಿದೆ ಅದು ಇನ್ನೂರು, ಮುನ್ನೂರು, ನಾನ್ನೂರು , ಐನೂರು ಅಡಿ ಕೆಳಗಡೆ ಹೋಗಿರತಕ್ಕಂಥದ್ದು. ಆದ್ದರಿಂದ ರಿಪೇರಿ ಜೊತೆಗೆ ಈ ರೀತಿಯಾಗಿ ಎಲ್ಲೆಲ್ಲಿ ವಾಟರ್ ಲೆವಲ್ ಕೆಳಗಡೆ ಹೋಗಿದೆ ಅಲ್ಲಿ ಕೂಡ ನೀರು ಒದಗಿಸುವುದಕ್ಕೆ ಇನ್ನೂ ಹೆಚ್ಚಿನ ಕೊಳವೆ ಬಾವಿಗಳನ್ನು ಹಾಕಿಸಲು ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : ಸ್ವಾಮಿ, ವಾಟರ್ ಲೆವಲ್ ಕಡಿಮೆಯಾಗಿರುವುದು ನಿಜ. ಅದಕ್ಕೆ ಎರಡು ಕಾರಣಗಳಿವೆ. ಒಂದು ಬೇಸಿಗೆಯಲ್ಲಿ ಕಡಿಮೆಯಾಗುತ್ತದೆ. ಮಳೆ ಬಂದಾಗ ವಾಟರ್ ಲೆವಲ್ ಸರಿಯಾಗುತ್ತದೆ. ಇನ್ನು ಒಂದು ಸಂದರ್ಭದಲ್ಲಿ ಟೆಂಪರರಿಯಾಗಿ ವಾಟರ್ ಲೆವಲ್ ಕಡಿಮೆಯಾಗಿದ್ದುದು ನಮಗೆ ಗೊತ್ತಿದೆ. ಆದ್ದರಿಂದ ಎಲ್ಲಿ ನೀರು ಸಿಗುವುದಿಲ್ಲ, ಅಲ್ಲಿ ಕಷ್ಟವಾಗಿದೆ. ಇದರ ಬಗ್ಗೆ ಹೇಳಿಕೆ ಕೊಡಬೇಕೆನ್ನುವುದು ಒಂದು ವಿಚಾರ ಇದೆ.

ಶ್ರೀ ಆರ್. ವಿ. ದೇಶಪಾಂಡೆ : ನಾವು ಇದರ ಬಗ್ಗೆ ವಿಚಾರ ಎತ್ತಿದೆವು. ತಾವು ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳುತ್ತಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ : ಸ್ಟೇಟ್‌ಮೆಂಟ್ ಎಂದರೆ ಒಂದು ಹತ್ತು ನಿಮಿಷದಲ್ಲಿ ನೀರಿನ ಪೊಜಿಷನ್ ಏನು ಎಂಬುದನ್ನು ಎಕ್ಸ್‌ಪ್ಲೈನ್ ಮಾಡುತ್ತೇನೆ. I will give a complete picture of water situation in Karnataka. I will give a statement.
ವಿಷಯಃ ರಾಜ್ಯದಲ್ಲಿ ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ.

580(ತಡೆಹಿಡಿದ ಪ್ರಶ್ನೆ)
ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಗ್ರಾಮಾಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕಳೆದ ಮೂರು ವರ್ಷಗಳಿಂದ ಕುಡಿಯುವ ನೀರಿಗಾಗಿ ಕೊರೆದ ಕೊಳವೆ ಬಾವಿಗಳು ಎಷ್ಟು? ಅವುಗಳಲ್ಲಿ ವಿಫಲವಾದ ಕೊಳವೆ ಬಾವಿಗಳೆಷ್ಟು?
ಆ) ವಿಫಲವಾದ ಕೊಳವೆ ಬಾವಿಗಳಿಗೆ ಖರ್ಚಾದ ಹಣವೆಷ್ಟು?
ಇ) ಧಾರವಾಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೊಳವೆ ಬಾವಿ ತೋಡಲಾಗಿದೆ? ಎಷ್ಟು ವಿಫಲವಾಗಿರುತ್ತದೆ?
ಈ) ಸದರಿ ಕೊಳವೆ ಬಾವಿಗಳನ್ನು ರಿಪೇರಿ ಮಾಡಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮಾಂತರಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು) :

ಅ) ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಕಳೆದ ಮೂರು ವರ್ಷಗಳಿಂದ ಕೊರೆದ ಕೊಳವೆ ಬಾವಿಗಳ ಸಂಖ್ಯೆ 21,558 ಅವುಗಳಲ್ಲಿ ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ 2,524.

ಆ) ರೂ.316.17 ಲಕ್ಷ ರೂಪಾಯಿಗಳು.

ಇ) ಧಾರವಾಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಕೊರೆದ ಬಾವಿಗಳ ಸಂಖ್ಯೆ 1126 ಅವುಗಳಲ್ಲಿ ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ 93.

ಈ) 1) 1-4-87ರ ನಂತರ ಕೈಪಂಪುಗಳ ನಿರ್ವಹಣೆಯನ್ನು ಮಂಡಲ ಪಂಚಾಯತಿಗೆ ವಹಿಸಲಾಗಿದೆ. ಪ್ರತಿ ತಾಲ್ಲೂಕಿನಲ್ಲಿರುವ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ಉಪ ವಿಭಾಗಗಳು ಮಂಡಲ ಪಂಚಾಯತಿಗೆ ಬೆಂಬಲ ನೀಡುತ್ತದೆ.

2) ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದಿಂದ ಆಯ್ಕೆಯಾಗಿ ಭೂಮಿ ಮೇಲಿರುವ ಕೈಪಂಪುಗಳ ಭಾಗವನ್ನು ದುರಸ್ತಿ ಮಾಡಲು ತರಬೇತಿ ಪಡೆದ ರಕ್ಷಕರು ಇರುತ್ತಾರೆ.

3) ರಕ್ಷಕರು : ಯಾಂತ್ರಿಕರ ಕೈಮೀರಿದ ಪಕ್ಷದಲ್ಲಿ ತಾಲ್ಲೂಕಿನ ಕೇಂದ್ರ ಕಛೇರಿಯಲ್ಲಿರುವ ಸಂಚಾರಿ ವಾಹನದ ತಂಡವು ದುರಸ್ತಿಯ ಕೆಲಸವನ್ನು ಮಾಡುತ್ತದೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಅಧ್ಯಕ್ಷರೆ , ಈಗಾಗಲೇ ವಾಟಾಳ್ ನಾಗರಾಜ್ ಅವರು ಹಾಕಿದ ಪ್ರಶ್ನೆಗೆ ಪೂರಕವಾಗಿ ನನ್ನ ಪ್ರಶ್ನೆ ಕೂಡ ಇದೆ. ಕಳೆದ 3 ವರ್ಷಗಳಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ತೋಡಿದ್ದೀರೆಂದರೆ,21,558. ಅದರಲ್ಲಿ ವಿಫಲವಾದವು 2524. ಇದಕ್ಕಾಗಿ ಒಟ್ಟಾರೆ 3 ಕೋಟಿ 16 ಲಕ್ಷ ರೂಪಾಯಿ ವ್ಯಯವಾಗಿದೆ ಎಂದು ಹೇಳುತ್ತಿದ್ದಾರೆ. ನನ್ನ ಮತ ಕ್ಷೇತ್ರದ ಬಂಕಾಪುರದಲ್ಲಿ 3 ಸಾರಿ ಕೊಳವೆ ಬಾವಿ ಕೊರೆದರು. ರಾಜಕೀಯ ಮುಖಂಡರ ಒತ್ತಡಕ್ಕೆ ಮಣಿದು ಅಲ್ಲಿ ಕೊರೆದರು. ಈ ವಿಚಾರದಲ್ಲಿ ಸಾಕಷ್ಟು ಹಣ ವ್ಯಯವಾಗುತ್ತಿರುವುದರಿಂದ ಬಾವಿ ಕೊರೆಯತಕ್ಕರ ಮೇಲೆ ಕ್ರಮ ಕೈಗೊಳ್ಳತಕ್ಕ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ವೈ. ಘೋರ್ಪಡೆ : ನನ್ನ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಇಡೀ ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ 21,558 ಬೋರ್‌ವೆಲ್‌ಗಳನ್ನು ನಾವು ಮಾಡಿದ್ದೇವೆ. ಅದರಲ್ಲಿ 2524 ಫೆಲ್ಯೂರ್ ಆಗಿದೆ. ಹೆಚ್ಚು ಕಡಿಮೆ ಹತ್ತು ಪರ್ಸೆಂಟ್ ಬೋರ್‌ವೆಲ್‌ಗಳು ಫೇಲ್ ಆಗಿವೆ. ಧಾರವಾಡ ಜಿಲ್ಲೆಯಲ್ಲಿ 1126 ಬೋರ್‌ವೆಲ್‌ಗಳ ಪೈಕಿ 93 ಫೇಲ್ ಆಗಿವೆ ಎಂದು ಒಪ್ಪಿದ್ದೇನೆ. ವಾಟರ್ ಟೇಬಲ್ ಪ್ರಶ್ನೆಯನ್ನು ಈಗಾಗಲೇ ಎತ್ತಿದ್ದಾರೆ. ಇದನ್ನು ತಾಂತ್ರಿಕವಾಗಿ ನೋಡುತ್ತಿದ್ದೇವೆ. ಡೈರೆಕ್ಟರ್ ಆಫ್ ಮೈನ್ಸ್ ಅಂಡ್ ಜಿಯಾಲಜಿಯವರು ಅಭ್ಯಾಸ ನಡೆಸಿ ಇಡೀ ಕರ್ನಾಟಕ ರಾಜ್ಯದಲ್ಲಿ ಹೈ ರಿಸ್ಕ್ ತಾಲ್ಲೂಕುಗಳು, ಮಿಡಿಯಂ ರಿಸ್ಕ್ ತಾಲ್ಲೂಕುಗಳು ಮತ್ತು ಲೋ ರಿಸ್ಕ್ ತಾಲ್ಲೂಕುಗಳು ಎಂದು ವಿಂಗಡಣೆ ಮಾಡಿದ್ದಾರೆ. ಹೈ ರಿಸ್ಕ್ ತಾಲ್ಲೂಕುಗಳಲ್ಲಿ 60-70 ಪರ್ಸೆಂಟ್ ಸಕ್ಸಸ್ ಆಗುತ್ತವೆ, ಮೀಡಿಯಂ ರಿಸ್ಕ್ ತಾಲ್ಲೂಕುಗಳಲ್ಲಿ 70-80 ಪರ್ಸೆಂಟ್, ಲೋ ರಿಸ್ಕ್ ತಾಲ್ಲೂಕುಗಳಲ್ಲಿ 80 ಪರ್ಸೆಂಟ್ ಸಕ್ಸಸ್ ಆಗುತ್ತವೆ. ಆದರೆ ವಿರಿಯಾಕ್ಕನುಗುಣವಾಗಿ 20-40 ಪರ್ಸೆಂಟ್ ಫೆಯಿಲ್ ಆಗುವ ಸಂಭವ ಇರುತ್ತವೆ. ನಮ್ಮ ಮಾಹಿತಿ ಪ್ರಕಾರ ಹತ್ತು ಪರ್ಸೆಂಟ್ ಫೆಯಿಲ್ ಆಗಿದೆ ಎಂದು ಆಗಲೇ ಮಾಹಿತಿ ಕೊಟ್ಟಿದ್ದೇನೆ. ವಾಟರ್ ಟೇಬಲ್ ಪ್ರಶ್ನೆ ವ್ಯಾಪಕವಾದ ಪ್ರಶ್ನೆ. ಇದಕ್ಕೆ ನಾವು ಪೈಪ್ ಸೆಟ್ ಕಲುಪಿಸಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ನೀರು ಇದ್ದರೆ ಬೋರ್‌ಗೆ

ಸಿಗುತ್ತದೆ, ನೀರಿಲ್ಲದಿದ್ದರೆ ಏನು ಮಾಡಬೇಕೆಂಬುದು ದೊಡ್ಡ ಪ್ರಶ್ನೆಯಾಗುತ್ತದೆ. ಅದರ ಬಗ್ಗೆ ಬೇರೆ ಚರ್ಚೆ ಮಾಡೋಣ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಮಾನ್ಯ ಅಧ್ಯಕ್ಷರೇ, ಜಲ ತಂತ್ರಜ್ಞರು ತಪ್ಪು ಮಾಡಿದಾಗ, ಬಾವಿಗಳು ವಿಫಲವಾದಾಗ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದರ ಬಗ್ಗೆ ಸಚಿವರಿಂದ ಉತ್ತರ ಬರಬೇಕು. ಕೊಳವೆ ಬಾವಿಗಳ ರಿಪೇರಿ ಬಗ್ಗೆ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಇಲ್ಲಿ ಏನಾಗಿದೆ ಎಂದರೆ, ಒಂದು ಕೊಳವೆ ಬಾವಿಗೆ 250 ರೂಪಾಯಿಗಳನ್ನು ದುರಸ್ತಿಗಾಗಿ ನಮ್ಮ ಧಾರವಾಡ ಜಿಲ್ಲಾ ಪರಿಷತ್ತಿನವರು ಕೊಡುತ್ತಿದ್ದಾರೆ. ಅಲ್ಲಿರತಕ್ಕ ಜಿಲ್ಲಾ ಪರಿಷತ್ತಿನ ಇಂಜಿನಿಯರ್‌ಗಳು ಜಿ. ಐ. ಪೈಪ್ ಹಾಕಬೇಕಾದರೆ 300 ರೂಪಾಯಿ ಬೇಕಾಗುತ್ತದೆ, ಸಿಲಿಂಡರ್ ರಿಪೇರಿ ಮಾಡಬೇಕಾದರೆ ಕನಿಷ್ಠಪಕ್ಷ 600 ರೂಪಾಯಿ ಬೇಕಾಗುತ್ತದೆಂದು ಹೇಳುತ್ತಿದ್ದಾರೆ. ಆದ್ದರಿಂದ ಸಚಿವರು 250 ರೂಪಾಯಿಗಳನ್ನು ಏನು ಗೊತ್ತು ಮಾಡಿದ್ದಾರೆ ಅದನ್ನು ತೆಗೆದು 600 ರೂಪಾಯಿಗಳನ್ನು ಕೊಳವೆ ಬಾವಿ ರಿಪೇರಿಗೆ ಕೊಡಬೇಕು ಮತ್ತು ಈಗಾಗಲೇ 50 ಪರ್ಸೆಂಟ್ ಬೋರ್‌ವೆಲ್‌ಗಳು ರಿಪೇರಿ ಆಗಬೇಕು ಎಂದು ಯಡಿಯೂರಪ್ಪನವರು ಹೇಳಿದ್ದಾರೆ ಇದನ್ನು ರಿಪೇರಿ ಮಾಡದಿದ್ದರೆ ರಾಜ್ಯ ಸರ್ಕಾರ ಆರ್ಥಿಕವಾಗಿ ಹೆಚ್ಚು ಹೊರೆ ಹೊರತಕ್ಕ ಪ್ರಸಂಗ ಬರುತ್ತದೆ. ಇದರ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

Sri M. Y. Ghorpade : I had informed you that I intend to call the all Zilla Parishad Chief Secretaries and Administrators division-wise for direct discussion at Bangalore after 15th March 1993. Certainly I will pay my closest attention to this.

ಶ್ರೀ ಬಿ. ಎಸ್. ಯಡಿಯೂರಪ್ಪ : 15ರವರೆಗೆ ವಿತಕ್ಕೆ ಕಾಯಬೇಕು? ಅಷ್ಟರೊಳಗೆ ಡೈರೆಕ್ಷನ್ ಕೊಡಿ, ಆಮೇಲೆ ಕರೆದು ಮಾತನಾಡಿ.

ಶ್ರೀ ಎಂ. ವೈ. ಘೋರ್ಪಡೆ : ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವುದಕ್ಕೆ ಡೈರೆಕ್ಷನ್ ಕೊಟ್ಟೇ ಕೊಡುತ್ತೇವೆ.

ಅಧ್ಯಕ್ಷರು : ಪ್ರಶ್ನೆ 1020ನ್ನು ವಿದ್ಯಾ ಇಲಾಖೆಗೆ ಟ್ರಾನ್ಸ್‌ಫರ್ ಮಾಡಲಾಗಿದೆ. ಆದ್ದರಿಂದ ಅದನ್ನು ಹೆಲ್ಡ್ ಓವರ್ ಮಾಡುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಇದು ಹಿಂದೆ ಹೆಲ್ಡ್ ಓವರ್ ಆಗಿದ್ದು ಮತ್ತೆ ಈಗ ಟ್ರಾನ್ಸ್‌ಫರ್ ಆಗಿದೆ ಎಂದರೆ ಹೇಗೆ?

ವಿಷಯ : ರಾಜ್ಯದಲ್ಲಿ ತೆಂಗು ಬೆಳೆಗಾರರಿಗೆ ಅನುದಾನ.

254

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ತೆಂಗು ಅಭಿವೃದ್ಧಿ ಬೆಳೆಯ ಅನ್ವಯ ತೆಂಗು ಮಂಡಳಿಯವರು ರೈತರಿಗೆ ಅನುದಾನ